O.S. NO. 16/2018
PW -2 .
Dated 16-06-2026.

ಸಾಕ್ಷಿಯನ್ನು ಈ ದಿನ ದಿನಾಂಕ 16-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 1, 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಶ್ರೀ ಎಸ್ ವಿ ಎಸ್ ವಕೀಲರಿಂದಃ

ನಾವು ವಾದ ಪತ್ರದೊಂದಿಗೆ ಹಾಜರು ಪಡಿಸಿದ ವಂಶಾವಳಿಯಲ್ಲಿ ಮೂಲ ಪುರುಷನ ಹೆಂಡತಿ ಹೆಸರು ಉದ್ದೇಶ ಪೂರ್ವಕವಾಗಿ ತೋರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಎಲ್ಲ ಆಸ್ತಿಗಳ ಚಕ್ಕಬಂದಿ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಚಕ್ಕಬಂದಿ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಅ ಅನುಕ್ರಮ ನಂ. 8 ಮತ್ತು 9 ಮಾತ್ರ ಪಿತ್ರಾರ್ಜಿತ ಆಸ್ತಿಗಳು ಇದ್ದು ಉಳಿದ ಎಲ್ಲ ದಾವಾ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಅ ಅನುಕ್ರಮ ನಂ. 3 ರಿಂದ 6 ಆಸ್ತಿಗಳನ್ನು ನನ್ನ ಅಜ್ಜ ಬಸವಂತಪ್ಪ ಇವರು ಅಪಸಾತ ವಾಟ್ನಿ ಮೂಲಕ 6 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಅ ಅನುಕ್ರಮ ನಂ. 7 ಆಸ್ತಿಯನ್ನು 1, 3 ಮತ್ತು 4 ನೇ ಪ್ರತಿವಾದಿ ಗಳಿಗೆ ಅಸಲು ದಾವಾ ನಂ. 30/2009 ರಲ್ಲಿ ಆದ ರಾಜಿ ಸಂದಾನ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಂದಿನಿಂದ ಅವರು ಸದರಿ ಆಸ್ತಿಯ ಮಾಲ್ಕಿ ಕಬ್ಜಾ ವಹಿವಾಟು ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಸಲು ದಾವಾ ನಂ. 30/2009

ರಲ್ಲಿ ಆದ ರಾಜಿ ಡಿಕ್ರಿಯನ್ನು ಎಲ್ಲಿಯಾದರೂ ಪ್ರಶ್ನಿಸಿದ್ದೀರಾ ಎಂದರೆ ನಮ್ಮ ಕೂಡು ಕುಟುಂಬಕ್ಕೆ ಆಸ್ತಿ ಬಂದಿದ್ದರಿಂದ ಅದನ್ನು ಪ್ರಶ್ನಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವಾ ಅನುಸೂಚಿ ಅ ಅನುಕ್ರಮ ನಂ. 7 ರಲಿ 1, 3 ಮತ್ತು 4 ನೇ ಪ್ರತಿವಾದಿಗಳು ಮಾಲ್ಕಿ ಕಬ್ಜಾ ವಹಿವಾಟ ಮಾಡುತ್ತಿದ್ದು, ನಾವು ಎಂದಿಗೂ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಅನುಸೂಚಿ ಅ ಅನುಕ್ರಮ ನಂ. 7 ಯಾವತ್ತು ನಮ್ಮ ಒಟ್ಟು ಕುಟುಂಬದ ಆಸ್ತಿ ಇರುವುದಿಲ್ಲ, ಅದು ಒಟ್ಟು ಕುಟುಂಬದ ಆಸ್ತಿ ಇದೆ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಮನೆ ಆಸ್ತಿಗಳಲ್ಲಿ ಅನುಕ್ರಮ ನಂ. 1 ಮತ್ತು 2 ಆಸ್ತಿಗಳು ಹೊರತು ಪಡಿಸಿ ಉಳಿದ ಎಲ್ಲ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಪೈಕಿ ಸ್ವಯಾರ್ಜಿತ ಆಸ್ತಿಗಳು ಯಾವುವು ಪಿತ್ರಾರ್ಜಿತ ಆಸ್ತಿಗಳು ಯಾವುವು ಎಂದು ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1989 ನೇ ಸಾಲಿನಲ್ಲಿ ಜನಿಸಿದ್ದೇನೆ. ಸದರಿ ದಾವಾ ಮನೆಗಳು ನಾನು ಜನಿಸುವ ಪೂರ್ವದಲ್ಲಿ ಕಟ್ಟಿಸಿಕೊಂಡಿದ್ದರಿಂದ ನನಗೆ ಅವುಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಮನೆಗಳ ಆಸ್ತಿ ಅನುಕ್ರಮ ನಂ. 5 ಮತ್ತು 6 ನೇ ಆಸ್ತಿಗಳು ನನ್ನ ತಂದೆಯ ಸಹೋದರ 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ಈ ಆಸ್ತಿಗಳನ್ನು 4 ನೇ ಪ್ರತಿವಾದಿ ತನ್ನ ನೌಕರಿಯಿಂದ ಬಂದ ಹಣ ದಿಂದ ಗಳಿಸಿರುತ್ತಾನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ 1997 ರಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕನಾಗಿ ನೇಮಕ ಗೊಂಡಿದ್ದು ನನಗೂ ಗೊತ್ತಿರುತ್ತದೆ ಎಂದರೆ ಸರಿ. ಸದರಿ 5

O.S. NO. 16/2018
PW -2 .
Dated 16-06-2026.

ಮತ್ತು 6 ನೇ ಮನೆ ಆಸ್ತಿಗಳನ್ನು ಮಹಾಂತೇಶ ಗೂಂಡ್ಲೂರ ರವರಿಂದ 4 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರು ಸ್ವಂತ ಖರೀದಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಆಸ್ತಿಗಳಲ್ಲಿ 2004 ರಲ್ಲಿ 4 ನೇ ಪ್ರತಿವಾದಿ ಪುರಸಬೆಯಿಂದ ಪರವಾನಿಗೆ ಪಡೆದು ಮನೆ ಸಹ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆ ಕಟ್ಟಲು 4 ನೇ ಪ್ರತಿವಾದಿ ತನ್ನ ನೌಕರಿಯ ಮೇಲೆ ಸಾಲ ಪಡೆದು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮದ್ಯಾಹ್ನದ 2 ಗಂಟೆ ಸಮಯ ಆಗಿದ್ದರಿಂದ ಮುಂದುವರೆದ ಪಾಟಿ ಸವಾಲು ಮದ್ಯಾಹ್ನನದ 2-45 ಗಂಟೆಗೆ ಮೂಂಡೂಡಲಾಯಿತು. )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.